ಬಿಟ್ಟುಕೊಳ್ಳುತ್ತಾನೆ...!' ಎಂದು ಇತ್ತೀಚೆಗೆ ಅಚ್ಚರಿ, ಕಾಳಜಿ ವ್ಯಕ್ತಪಡಿಸಿದರು. ಬಹುಶಃ ಸಂ ಪ್ರಕಟಿಸುವ ಈ ಅಪ್ರಿಯ ಸ್ವಭಾವ ಅಪ್ಪನಿಂದ ಬಂದ ಬಳುವಳಿ.

ಶಾಲೆಯಲ್ಲಿ ಹೆಚ್ಚು ಕಲಿಯದ ಉಪಸಂ ಅಪ್ಪನಿಗೆ ಪುಸ್ತಕ ಓದುವ, ಮನೆಯ ಅಟ್ಟದ ಮೇಲೆ ಸಂಗ್ರಹಿಸುವ ಹುಚ್ಚಿತ್ತು. ಹಿರಿಯರ ಅಣತಿಯಂತೆ ಯಾವುದೋ ಸಾಮಾನು ತರಲು ಅಟ್ಟ ಏರುತ್ತಿದ್ದ ಬಾಲಕನಿಗೆ ಪುಸ್ತಕದ ಪುಟಗಳನ್ನು ತಿರುಗಿಸುವ, ಓದಿಗೆ ತೆರೆದುಕೊಳ್ಳುವ ಚಟ ಅಂಟಿಕೊಳ್ಳುವಲ್ಲಿ ವಿಶೇಷವೇನೂ ಇರಲಿಲ್ಲ. ಚಿಕ್ಕಪ್ಪ ಬೇರೆ ಅದೇ ವ್ಯಸನ ಹಚ್ಚಿಕೊಂಡು ಬರವಣಿಗೆಯಲ್ಲೂ ತೊಡಗಿದ್ದ. ಬಡಿಗೆಗಾರಿಕೆ ಕಸುಬಿನ ಕುಟುಂಬದಲ್ಲಿ ಹೀಗೆ ಮೂವರು ಹಾದಿ ತಪ್ಪಿದವರಂತೆ ಅಕ್ಷರಗಳ ಸಹವಾಸ ಬೆಳೆಸಿಕೊಂಡಿದ್ದಂತೂ ವಿಶೇಷವೇ.

ಅಪ್ಪನ ಯಕ್ಷಗಾನದ ವ್ಯಸನಸ್ವರೂಪಿ ಪ್ರೀತಿ ಸುತ್ತಲಿನ ಹಳ್ಳಿಗಳಲ್ಲಿ ಹಲವು ಪ್ರತೀತಿ ಮತ್ತು ಪ್ರತಿರೋಧಕ್ಕೂ ಕಾರಣವಾಗಿತ್ತು. ಸಾಮಾನ್ಯವಾಗಿ ಹಿಂದೂ ಪೌರಾಣಿಕ ಕಥಾವಸ್ತುಗಳನ್ನೇ ಒಳಗೊಂಡ ಯಕ್ಷಗಾನದ ಪ್ರಸಂಗಗಳನ್ನು ನೋಡುವುದರ ಬಗ್ಗೆ ಊರಿನ ಕರ್ಮಠ ಕುಲಬಾಂಧವರು ಸಹಜವಾಗಿಯೇ ಒಲವು ಹೊಂದಿರಲಿಲ್ಲ. ಆದರೆ ಉಪಸಂ ಅಪ್ಪನಿಗೆ ಯಕ್ಷಗಾನ ಆಟದ ಬಗ್ಗೆ ಮೊದಲ ಸಾಲಿನಲ್ಲಿ ಕೂತು ರಾತ್ರಿಯಿಡೀ ಆಸ್ವಾದಿಸುವ ಅಭಿಮಾನ. ಬಂಧುಬಾಂಧವರ ವಿರೋಧಕ್ಕೆ ಸೊಪ್ಪು ಹಾಕದ ತನ್ಮಯತೆ. ಕರಾವಳಿಯ ಭಾಗದಲ್ಲಿ ಹೊಸದಾಗಿ ಹುಟ್ಟಿದ ಕೋಮುವಾದಿ ಮನಸ್ಥಿತಿಯ ಪರಿಣಾಮವಾಗಿ ಯಕ್ಷಗಾನ ಪ್ರಸಂಗಗಳಲ್ಲಿ ನುಸುಳುವ ಅವಹೇಳನಕಾರಿ ಸಂಭಾಷಣೆಗಳು ಅಪ್ಪನಲ್ಲಿ ನಿರಾಶೆಗೂ ಕಾರಣವಾಗಿವೆ.

ಅಕ್ಕಂದಿರಿಗೆ ಬುರ್ಕಾ ಕಡ್ಡಾಯ ಮಾಡದ ಉದಾರಗುಣವಷ್ಟೇ ಅಲ್ಲ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವ ಅಪ್ಪನ ನಿಲುವು ಕೂಡ ಸಾಂಪ್ರದಾಯಿಕ ಸಹವರ್ತಿಗಳ ಅಸಹನೆಗೆ ನೀರೆರೆಯಿತು. ಆದರೆ ಅಪ್ಪ ಅವರಿವರ ಆಡಿಕೊಳ್ಳುವ ಬಾಯಿಗಳಿಗೆ ಕಿವಿಯಾಗದೆ ತಾನಾಯಿತು, ತನ್ನ ನಂಬಿಕೆಯಾಯಿತು ಎಂದು ಹೃದಯದ ಮಾತು ಪಾಲಿಸುತ್ತಾ ಕಾಯಕದಲ್ಲಿ ನಿರತ.

* * *

ಸಂಪಾದಕನಿಗೆ ಹುಡುಗ ಒಪ್ಪಿಗೆಯಾದ. ಪ್ರಕಾಶಕರು, 'ಆಯ್ಕೆ ನಿಮಗೆ ಬಿಟ್ಟಿದ್ದು' ಎಂದು ಹಸಿರು ನಿಶಾನೆ ತೋರಿಸಿದರು. ಹುಡುಗ ಕರ್ತವ್ಯಕ್ಕೆ ಹಾಜರಾದ. ಮುಂಚೆ ಇದೇ ಹುದ್ದೆಯಲ್ಲಿದ್ದ ಮುಸ್ಲಿಂ ಸಮುದಾಯದ ವ್ಯಕ್ತಿಯ ಜಾಗಕ್ಕೆ ಈತ ಹೊಸದಾಗಿ ಸೇರಿದಂತಾಯಿತು. ಸದಾ ರಾಜಕಾರಣದ ಆವಾರದಲ್ಲಿ ಸಂಚರಿಸುವ, ಬಲವೊಲವಿನ ಗೆಳೆಯರೊಬ್ಬರು, 'ಅಂತೂ ಬ್ಯಾಕಲಾಗ್ ಹುದ್ದೆ ತುಂಬಿಸಿಕೊಂಡಿರಿ...' ಎಂದು ಡೈಲಾಗ್ ಹೊಡೆದರು.

ಪತ್ರಿಕಾ ಕಚೇರಿಯಲ್ಲಿ ಪ್ರತಿನಿತ್ಯ ಅಕ್ಷರಗಳೊಂದಿಗೆ ಗುದುಮುರಗಿ ಹಾಕಬೇಕಾದ ಅನಿವಾರ್ಯ ಸನ್ನಿವೇಶದಲ್ಲಿಯೂ ಹುಡುಗನ ಒಳಗಿನ ಸೃಜನಶೀಲತೆಯ ರೆಕ್ಕೆ ಫಡಫಡಿಸುತ್ತಿತ್ತು. ಶೀರ್ಷಿಕೆ ನೀಡುವಲ್ಲಿ, ಇಂಟ್ರೊ ಕೊಡುವಲ್ಲಿ, ನಿರೂಪಣೆ ತಿದ್ದುವಲ್ಲಿ ಅವನೊಳಗಿನ ಕವಿ ಕದ್ದು ಮೂಗು ತೂರಿಸುತ್ತಿದ್ದ. 'ಅಪಾರ್ಟಮೆಂಟುಗಳಲ್ಲಿ ಅರಳಿದ ಬದುಕು' ಎಂದಿದ್ದ ಲೇಖನವೊಂದರ ಶೀರ್ಷಿಕೆಯನ್ನು 'ಅಪಾರ್ಟಮೆಂಟುಗಳಲ್ಲಿ ಅರಳಿದಷ್ಟೇ ಬದುಕು' ಎಂದು ತಿದ್ದುವ ಚುರುಕುತನ ಅವನಲ್ಲಿತ್ತು. ಶುಕ್ರವಾರ ಮಧ್ಯಾಹ್ನ ಊಟಕ್ಕೆ ತುಸು ಬೇಗ ಹೊರಟು ನಮಾಜು ಮುಗಿಸಿಕೊಂಡು ಬರುತ್ತಿದ್ದ.

ತಮ್ಮೂರಿನ ರಸ್ತೆಯ ಅವಸ್ಥೆಯನ್ನು ಬಣ್ಣಿಸುವುದರಲ್ಲಿಯೂ ಹುಡುಗನ ಬರವಣಿಗೆಯ ವಿಶಿಷ್ಟ ವ್ಯಂಗ್ಯ ಬೆಳಗುತ್ತಿತ್ತು: 'ಇಲ್ಲಿ ನಿಮ್ಮನ್ನು ಮೊದಲು ಈ ಪುರಾತನ ರಸ್ತೆಗಳು ಆತ್ಮೀಯವಾಗಿ ಸ್ವಾಗತಿಸುತ್ತವೆ. ಆನಂತರ ಜನ ಸ್ವಾಗತಿಸುವುದು. ಪುರಾತನ ಕಾಲದ ಈ ರಸ್ತೆಗಳನ್ನು ಒಂದು ಚೂರೂ ಬದಲಾಯಿಸದೆ ಕಾಪಾಡಿಕೊಂಡು ಬಂದಿದ್ದೇವೆ. ಯಾವ ಗುಂಡಿಯೂ ಕೂಡ ಮುಚ್ಚಿ ಹೋಗದಂತೆ ಎಚ್ಚರವಹಿಸಿ, ಜತನದಿಂದ ಉಳಿಸಿಕೊಂಡು ಬಂದಿದ್ದರಿಂದ ಅದರ ಕಳೆ ಇನ್ನೂ ಹಾಗೆಯೇ ಉಳಿದಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೆರೆಗಳನ್ನೂ ನಿರ್ಮಾಣ ಮಾಡಲಾಗಿದೆ. ಕೆರೆಗಳು ವಿಸ್ತಾರವಾದಂತೆ ಅಲ್ಲಿ ದನ, ಎಮ್ಮೆಗಳು ಬಂದು ವಿಶ್ರಾಂತಿ ಪಡೆಯುವುದನ್ನೂ ಒಮ್ಮೊಮ್ಮೆ ಕಾಣಬಹುದು. ಈ ರಸ್ತೆಯಲ್ಲಿ ವಾಹನ ಚಲಾಯಿಸುವವರು ಬಹುತೇಕ ಗ್ಯಾರೇಜಿನ ಬಳಿಯೇ ನಿಲ್ಲಿಸುವುದು ಇಲ್ಲಿನ ಪದ್ಧತಿ. ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಇಲ್ಲಿನ ಯುವ ಸಮೂಹದ ಮೇಲಿದೆ'.